LEGISLATIVE ASSEMBLY.

FOURTEENTH DAY.

Friday, 30th March 1951.

The Assembly met in the Assembly Hall, Old Public Offices, Bangalore, at Seven Minutes past Eight of the Clock.

Mr. Speaker (The Hon'ble Sri V. Venkatappa) in the Chair.

STARRED QUESTIONS

(to which oral answers were given)

Mr. SPEAKER.—Questions. Question No. 188. Sri A. G. Ramachandra Rao.

Sri Kadidal MANJAPPA (Shimoga District—General).—There are some questions in Parts IV and VI which remain unanswered.

The Hon'ble Sri H. C. DASAPPA (Minister for Finance and Industries).—I will answer them if the Hon'ble Member is pleased.

Sri Kadidal MANJAPPA.—Yes, sir.

Paddy seeds distributed from depots in Hassan and Hole-Narsipur Taluks.

ಶ್ರೀ ಎ. ಜಿ. ರಾಮಚಂದ್ರರಾಯರು (ಹಾಸನ ಡಿಸ್ಟ್ರಿಕ್ಟ್—ಸಾರ್ವತ್ರಿಕ ಚುನಾವಣೆ ಸ್ಥಾನ).—

*ಪ್ರಶ್ನೆ 188.—ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ:—

(a) ಹಾಸನ ಮತ್ತು ಹೊಳೇನರಸೀಪುರ ತಾಲ್ಲೂಕುಗಳಲ್ಲಿರುವ ಡಿಪೋಗಳಿಂದ ಯಾವಯಾವ ಬಗೆಯ ಬೀಜದ ಬತ್ತವು ಹಂಚಿಕೆ ಮಾಡಲ್ಪಟ್ಟಿದೆ; ಮತ್ತು, ಆ ರೀತಿ ಹಂಚಿಕೆ ಮಾಡಲ್ಪಟ್ಟ ರತಕ್ಕ ಪ್ರತಿಯೊಂದು ಬಗೆಯ ಬೀಜದ ಬತ್ತದ ಪ್ರಮಾಣವೆಷ್ಟು;

(b) ಈ ಬೀಜದ ಬತ್ತವು ಫಲಕಾರಿಯಾಗದೆ ನಷ್ಟವಾಯಿತೆಂಬುದಾಗಿ ಎಲ್ಲೆಲ್ಲಿಯೂ ಸುದ್ದಿ ಹರಡಲಿಲ್ಲವೆ;

(c) ಈ ಬೀಜಗಳನ್ನು ಉಪಯೋಗಿಸಿದವರಿಗುಂಟಾದ ನಷ್ಟಗಳಿಂದ ಅವರನ್ನು ಪಾರುಮಾಡಲು ಕೈಕೊಂಡಿರತಕ್ಕ ರಕ್ಷಣಾ ಏರ್ಪಾಡುಗಳಾವುವು?

ಮಾನ್ಯ ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಶಾಖೆಯ ಸಚಿವರು).—

ಉತ್ತರ.— (a) ವಿವರಗಳನ್ನು ಈ ಕೆಳಗೆ ಕಂಡ ತಃಖ್ತೆಯಲ್ಲಿ ಕೊಡಲಾಗಿದೆ:—

ನಂಬರು	ರಖಮುಗಳು	ಹಾಸನ		ಹೊಳೇನರಸೀಪುರ	
		ಪಲ್ಲಾಗಳು	ಸೇರುಗಳು	ಪಲ್ಲಾಗಳು	ಸೇರುಗಳು
1.	ಎಸ್. 661 ಬತ್ತ	229	79	154	39
2.	ಎಸ್. 701 ,, ...	15	30	143	98
3.	ಎಸ್. 749 ,, ...	213	57	29	45
4.	ಎಸ್. 139 ,, ...	28	50	...	...
5.	ಎಸ್. 705 ,, ...	11	4	...	...
6.	ಎಸ್. 246 ,, ...	5	30	...	...
7.	ಎಸ್. 317 ,, ...	5	54	...	...
8.	ಎಸ್. 718 ,, ...	3	40	...	...
9.	ಹಾಲುಬ್ಬಲು ,, ...	9	67	2	58
10.	ಬಂಗಾರ್‌ತೀಗ ಬತ್ತ	8	83	...	...
11.	ಕೇಸರಿದೊಡ್ಡಿ ,, ...	14	56	24	42
12.	ಬಿ. ರಖಮು ,, ...	4	99	...	...
13.	ಬರೋಡ ,, ...	1	80	...	...
14.	ಎಸ್. 699 ,, ...	...	...	0	80
15.	ನಕಲಾತಿ ,, ...	...	...	8	00
16.	ನೆಲ್ಲೂರು ಸಣ್ಣ ,, ...	...	...	21	47
	ಒಟ್ಟು ...	542	79	385	9

(ಮಾನ್ಯ ಶ್ರೀ ಟಿ. ಮರಿಯಪ್ಪನವರು).

(b) ವ್ಯವಸಾಯದ ಇಲಾಖೆಯಿಂದ ಒದಗಿಸಲ್ಪಟ್ಟ, ಬೀಜಗಳ ಒಟ್ಟು ಪ್ರದೇಶದ ಶೇಕಡ 5ರಷ್ಟು ಭಾಗದಲ್ಲಿ ಮಾತ್ರ ಬಿತ್ತಲ್ಪಟ್ಟುದರಿಂದ, ಈ ಸಂಬಂಧದಲ್ಲಿ ಗಿಂಟಾಗಿರತಕ್ಕ ನಷ್ಟವು ಅವರಿಂದ ಹಂಚಿಕೆಯಾಗಿರತಕ್ಕ ಬೀಜಗಳಿಂದ ಸಂಭವಿಸಿದುದಾಗಿಲ್ಲ, ಆದರೆ, ಬೀಜಗಳು ಮೊಳಕೆಯಾಗುವ ಕಾಲದಲ್ಲಿ ಭಾರಿ ಮಳೆಗಳು ಬಿದ್ದುದೇ ಮುಂತಾದ ಕಾಲ ಸ್ಥಿತಿಗಳ ದೆಸೆಯಿಂದಲೂ ಮಿತಿಮೀರಿದ ನೀರಾವರಿಯಿಂದಲೂ ಮತ್ತು ಅಕಾಲದಲ್ಲಿ ಬೀಜವನ್ನು ಬಿತ್ತನೆಮಾಡಿದುದರಿಂದಲೂ ಪೈರಿಗೆ ರೋಗ ತಗಲಿದುದರಿಂದಲೂ ಈ ನಷ್ಟವುಂಟಾಯಿತು.

(c) ಫಸಲು ಕೆಟ್ಟಿದ್ದು ಹಂಚಿಕೆಯಾದ ಬೀಜದ ದೆಸೆಯಿಂದಲ್ಲ. ಸನ್ಯ ರೋಗಗಳು ಮತ್ತು ಕ್ರಿಮಿಕೀಟಗಳ ಈತಿಬಾಧೆಗಳು ತಲೆದೋರಿದ ಸಂದರ್ಭಗಳಲ್ಲೆಲ್ಲ ಕೂಡಲೇ ವ್ಯವಸಾಯದ ಇಲಾಖೆಯವರು ರಕ್ಷಣಾ ಏರ್ಪಾಡುಗಳನ್ನು ಕೈಕೊಂಡಿರುತ್ತಾರೆ.

ಶ್ರೀ ಎ. ಜಿ. ರಾಮಚಂದ್ರರಾಯರು.—ಒಟ್ಟು ಹಾನನ ಹೊಳೆನರಸಿಪುರಗಳಿಂದ ಬೀಜ ಕೊಟ್ಟವರುವುದು 927 ಪಲ್ಲಾಗಳಾಗುತ್ತವೆಯಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎರಡನ್ನೂ ಕೂಡಿದರೆ ಅಷ್ಟು ಬರುತ್ತದೆ.

ಶ್ರೀ ಎ. ಜಿ ರಾಮಚಂದ್ರರಾಯರು.—ಇಲ್ಲಿ ಕೊಟ್ಟಿರುವ ಉತ್ತರಗಳನ್ನು ನೀವು ಅಲ್ಲಿಗೇ ಈ ಪ್ರಶ್ನೆಗಳನ್ನು ಕಳುಹಿಸಿಕೊಟ್ಟು ಅವರಿಂದಲೇ ಉತ್ತರಗಳನ್ನು ತರಿಸಿದ್ದೀರೋ ಅಥವಾ ಅವರಿಂದ ರಿಪೋರ್ಟ್ ತೆಗೆದು ಕೊಂಡು ಅದರ ಮೇರೆಗೆ ಸರಿಯಾದ ಉತ್ತರಗಳನ್ನು ನೀವೇ ಯೋಚನೆಮಾಡಿ ಹಾಕಿದ್ದೀರೋ ?

The Hon'ble Sri T. MARIAPPA.—That question does not arise.

ಶ್ರೀ ಎ. ಜಿ. ರಾಮಚಂದ್ರರಾಯರು.—ಏಕೆಂದರೆ ಮಳೆ ಆ ಪ್ರದೇಶದಲ್ಲಿ ಹೆಚ್ಚಾಗಿ ಆದುದರಿಂದ ಮೊಳಕೆಯಾಗಲಿಲ್ಲವೆಂದು ಉತ್ತರ ಕೊಟ್ಟಿದ್ದೀರಿ. ಮಳೆ ಹೆಚ್ಚಾಯಿತು ಎಂದರೆ, ಸಾಧಾರಣವಾಗಿ ಅಲ್ಲಿ ಎಷ್ಟು ಮಳೆಯಾಗುತ್ತದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ಭಾಗದಲ್ಲಿ ಬೀಜಹಾಕುವ ಕಾಲದಲ್ಲಿ ಹೆಚ್ಚಿಗೆ ಮಳೆಯಾಯಿತು. ಅದರಲ್ಲೂ ಹೂಬಿಡುವ ಕಾಲದಲ್ಲಿ ಮಳೆಯಿಲ್ಲದೆ ಹೀಗಾಯಿತೆಂದು ಗೊತ್ತಾಗಿದೆ. ಏಕೆಂದರೆ ಇದೇ ಜಾತಿಯ ಬೀಜ ಬೇರೆ ಕಡೆಗಳಲ್ಲಿ ಸರಿಯಾಗಿ ಆಗಿದೆ.

ಶ್ರೀ ಎ. ಜಿ. ರಾಮಚಂದ್ರರಾಯರು.—ಇದು ಎಷ್ಟು ಕಡೆಗಳಲ್ಲಿ ಸರಿಯಾಗಿ ಆಗಿದೆ, ಎಷ್ಟು ಕಡೆಗಳಲ್ಲಿ ಆಗಿಲ್ಲವೆಂಬುದನ್ನು ಹೇಳುತ್ತಿರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್ ಕೊಟ್ಟರೆ ಹೇಳುತ್ತೇನೆ.

ಶ್ರೀ ಎ. ಜಿ. ರಾಮಚಂದ್ರರಾಯರು.—ಸನ್ಯ ರೋಗಗಳಿಂದಲೂ ಮತ್ತು ಕ್ರಿಮಿಕೀಟಗಳಿಂದಲೂ ಪೈರು ಹಾಳಾಗಿದೆಯೆಂದು ಹೇಳಿದ್ದೀರಿ. ಯಾವ ಸನ್ಯರೋಗ ಹಾಗೆ ತಗಲಿದ್ದು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ ಒಂದು ಪ್ರದೇಶದಲ್ಲಿ ಹೆರಿಕ್ಯುಲೇರಿಯ ಎಂಬ ಫಂಗಸ್‌ರೋಗ ಬಂತು. ಇದರಿಂದ ಶೇಕಡ ಎಂಟರಷ್ಟು ಹತ್ತರಷ್ಟು ಜಳ್ಳಾಗುವುದಕ್ಕೆ ಕಾರಣವಾಯಿತು.

ಶ್ರೀ ಎ. ಜಿ. ರಾಮಚಂದ್ರರಾಯರು.—ಈ ಸ್ಥಳವನ್ನು ನೋಡಿಕೊಂಡು ಬರುವುದಕ್ಕೆ ವ್ಯವಸಾಯದ ಡೈರೆಕ್ಟರವರು ಹೋಗಿದ್ದರಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಡೈರೆಕ್ಟರಲ್ಲದೆ ಡೆಪ್ಯುಟಿ ಡೈರೆಕ್ಟರವರೂ ಹೋಗಿದ್ದರು.

ಶ್ರೀ ಎ. ಜಿ. ರಾಮಚಂದ್ರರಾಯರು.—ಅವರು ಅಲ್ಲಿಗೆ ಹೋಗಿ ಪರಿಶೀಲನೆಮಾಡಿದ ಮೇರೆ ಈ ಜಾತಿಯ ಬೀಜಗಳನ್ನು ಹಂಚಿಕೆ ಮಾಡಬೇಡವೆಂದು ಅವರಿಗೆ ತಿಳಿ ಹೇಳಿಕೆ ಕೊಟ್ಟಿದ್ದಾರಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದರಲ್ಲ ಒಂದು ಜಾತಿಯದನ್ನು ಮಾತ್ರ ಕೊಡಬಾರದೆಂದು ಹೇಳಿದ್ದಾರೆ. ಬಾಕಿಯವೆರ್ಲಾ ಸಾಮಾನ್ಯವಾಗಿ ಚಾಲ್ತಿಯಲ್ಲರುವ ಜಾತಿಯವೇ. For example Nos. (1) and (2) refer to Coimbatore variety of paddy unfortunately susceptible to this "blast disease". Ratnachoodi is a variety which is being popularised and it has grown very well in Shimoga District.

ಶ್ರೀ ಎ. ಜಿ. ರಾಮಚಂದ್ರರಾಯರು.—ಹೀಗಿದ್ದರೂ (1)ನೆಯ ಮತ್ತು (2)ನೆಯ ಜಾತಿಯವನ್ನೇ ಒಟ್ಟು 927 ಪಲ್ಲಾಗಳಲ್ಲಿ 500 ಪಲ್ಲಾಕ್ಕಿಂತಲೂ ಜಾಸ್ತಿಯಾಗಿ ಕೊಟ್ಟಿದೆಯೆಂಬುದು ಗೊತ್ತಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ (1)ನೆಯ ಮತ್ತು (2)ನೆಯ ಜಾತಿಯವುಗಳಲ್ಲಿ ಅಕ್ಕಿ ಬಹಳ ಚೆನ್ನಾಗಿರುತ್ತದೆಂದು ಕೆಲವರು ವ್ಯಾಮೋಹಪಡುತ್ತಾರೆ. ಆದರೆ ಅದಕ್ಕೆ ಈ "ಬ್ಲಾಸ್ಟ್ ರೋಗ" ಸುಲಭವಾಗಿ ತಗುಲುತ್ತದಾದ್ದರಿಂದ ಇತ್ತೀಚೆಗೆ ರತ್ನಚೂಡಿಯನ್ನೇ ಹೆಚ್ಚಿಗೆ ಪ್ರಚಾರಕ್ಕೆ ತರಬೇಕೆಂದು ಹೇಳಿದ್ದೇವೆ. ಇದು ತಕ್ಕಮಟ್ಟಿಗೆ ರೋಗಗಳನ್ನು ತಡೆದುಕೊಳ್ಳುವ ಶಕ್ತಿ ಹೊಂದಿದೆಯೆಂದು ಗೊತ್ತಾಗಿದೆ.

ಶ್ರೀ ಎ. ಜಿ. ರಾಮಚಂದ್ರರಾಯರು.—ಅಲ್ಲಿಗೆ ನೀವು ಕೊಟ್ಟಿರುವ ಬೀಜದಲ್ಲಿ ಶೇಕಡ 50 ಭಾಗಕ್ಕಿಂತ ಈ ಎರಡು ಜಾತಿಯವೇ ಹೆಚ್ಚಾಗಿರುತ್ತವೆಯಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಡಿದರೆ ತಮಗೇ ಗೊತ್ತಾಗುತ್ತದೆ. ಸ್ವಲ್ಪ ಇಲ್ಲ ಇದು ಹೆಚ್ಚಾಗಿದೆಯೆಂದು ಕಂಡುಬಂದರೂ, when compared to the entire area sown with paddy or transplanted with paddy it is not even thirty per cent.

ಶ್ರೀ ಎ. ಜಿ. ರಾಮಚಂದ್ರರಾಯರು.—ಹೀಗೆ ಈ ಒಟ್ಟು ಬೀಜಗಳ ಬಿತ್ತನೆಯಿಂದ ಬೆಳೆ ಬಂದಿರತಕ್ಕದ್ದೆಲ್ಲಾ ಶೇಕಡ 25 ರಷ್ಟಕ್ಕಿಂತ ಕಚ್ಚಾಗಿಲ್ಲವೆಂಬುದರ ಬಗ್ಗೆ ತಮಗೇನಾದರೂ ಇಲಾಖೆಯವರು ವರದಿ ಮಾಡಿದ್ದಾರೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ. ಹೀಗೆ ಈ ಬಾಬುಗಳ ನರಬರಾಯಿಯ ದೆಸೆಯಿಂದಲೇ ಬೆಳೆ ಕೆಟ್ಟುಹೋಗಿಲ್ಲ. It depends upon various factors. ಮಳೆ ಹೆಚ್ಚಾಗಿ ಬಂದರೆ, ಅಕಾಲದಲ್ಲಿ ಬಿತ್ತನೆ ಮಾಡಿದರೆ ಇತ್ಯಾದಿ ಹೀಗೆ ಬೆಳೆಯ ನಷ್ಟಕ್ಕೆ ನಾನಾ ಕಾರಣಗಳಿವೆ.

ಶ್ರೀ ಎ. ಜಿ. ರಾಮಚಂದ್ರರಾಯರು.—ಈ 900 ಪಲ್ಲ ಬೀಜ ಕೊಟ್ಟಿದ್ದರ ಪೈಕಿ, ಎಷ್ಟುಸಲ್ಲ ದವಸ ವಾಪಸ್ ಬಂದಿದೆ ?

The Hon'ble Sri T. MARIAPPA.—I cannot give an off-hand answer, sir. It depends upon various factors. ಗೊಬ್ಬರ ಹೆಚ್ಚಾಗಿ ಹಾಕಿದರೆ ಬೆಳೆ ಹೆಚ್ಚಾಗಿ ಆಗುತ್ತೆ. ನೀರು

ಚೆನ್ನಾಗಿ ಸರಬರಾಯಿ ಆದರೆ ಬೆಳೆ ಚೆನ್ನಾಗಿ ಆಗುತ್ತೆ. ಆದ್ದರಿಂದ ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ.

ಶ್ರೀ ಎ. ಜಿ. ರಾಮಚಂದ್ರರಾಯರು. —ಈ ಭತ್ತವನ್ನು ಒಂದು ಪಲ್ಲಾ ಬಿತ್ತಿದ್ದಾರೆ 30 ಪಲ್ಲ ದವಸ ಆಗುತ್ತದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎ. ಜಿ. ರಾಮಚಂದ್ರರಾಯರು.—ಹೀಗೆ ವ್ಯವಸಾಯದ ಇಲಾಖೆಯಿಂದ ಬೀಜಗಳನ್ನು ಸರಬರಾಯಿ ಮಾಡಿದಬಗ್ಗೆ ಎಷ್ಟು ನಷ್ಟವಾಗಿದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಾಗೆ ಸರಬರಾಯಿ ಮಾಡಿದ ಬೀಜಗಳಲ್ಲಿ ಯಾವ ಲೋಪವೂ ಇಲ್ಲ. ಈ ರತ್ನಚೂಡಿ ಭತ್ತದ ಬೆಳೆ ಹೇಗೆ ಆಗಿರುತ್ತೆಂಬುದರ ಬಗ್ಗೆ ಮಂಡ್ಯ ಶಿವಮೊಗ್ಗ ಜಿಲ್ಲೆಗಳಲ್ಲಿ ವಿಚಾರಮಾಡಿ ನೋಡಿ. ತಮಗೇ ಗೊತ್ತಾಗುತ್ತದೆ.

ಶ್ರೀ ಎ. ಜಿ. ರಾಮಚಂದ್ರರಾಯರು.—ಹಾಗೆ ಆ ಬೀಜದ ಭತ್ತವನ್ನು ಉಪಯೋಗಮಾಡಿರತಕ್ಕವರ ಪೈಕಿ ಒಬ್ಬ ಮಾನ್ಯ ಸದಸ್ಯರು ಈಗ ಇದೇ ಸಭೆಯಲ್ಲಿ ಇದ್ದಾರೆಂಬ ಅಂಶ ತಮಗೆ ಗೊತ್ತಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು. —ಇರಬಹುದು. ಹಾಗೆ ರೋಗ ಎಲ್ಲೆಲ್ಲಿ ಈ ಭತ್ತಕ್ಕೆ ತಗುಲಿತ್ತೋ ಅಲ್ಲೆಲ್ಲಾ ತಕ್ಷಣ ಕಾರ್ಯಕ್ರಮವನ್ನು ಕೈಗೊಂಡು ಅಸೆಡಿಕ್ ಡಸ್ಟ್ ಇತ್ಯಾದಿಗಳನ್ನೆಲ್ಲಾ ಪ್ರಯೋಗ ಮಾಡಲಾಗಿದೆ. ಈಬಗ್ಗೆ ರೈತರಿಗೆ ಎಲ್ಲಾ ತಿಳಿವಳಿಕೆಗಳನ್ನು ಕೊಡಲಾಗಿದೆ.

ಶ್ರೀ ಎ. ಜಿ. ರಾಮಚಂದ್ರರಾಯರು.—ಹಾಗೆ ತಾವು ಕೊಡಲ್ಪಟ್ಟ ತಿಳುವಳಿಕೆಗಳು ನರಿಯಾಗಿ ಆಚರಿಸಲ್ಪಡುತ್ತಿವೆಯೆಂಬ ಬಗ್ಗೆ ನೀವೇನಾದರೂ ವರದಿಗಳನ್ನು ತರಿಸಿಕೊಳ್ಳುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತರಿಸಿಕೊಳ್ಳುತ್ತೇವೆ.

ಶ್ರೀ ಎ. ಜಿ. ರಾಮಚಂದ್ರರಾಯರು.—ಹೀಗೆ ಬೀಜದ ಭತ್ತದಲ್ಲಿ ಅವಗುಣಗಳಿವೆಯೆಂದು ತಿಳಿದು ಬಂದಮೇಲಾದರೂ ಇಂಥಾ ಬೀಜದ ಕಾಳುಗಳನ್ನು ರೈತರಿಗೆ ಕೊಡಬಾರದೆಂದು ಮಾಡುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮಾಡಲಾಗುತ್ತೆ.

ಶ್ರೀ ಎ. ಜಿ. ರಾಮಚಂದ್ರರಾಯರು.—ಹೀಗೆ ಈ ಸಂಬಂಧವಾಗಿ ರೈತರೊಬ್ಬರಿಗೇ ಲುಕ್ಸಾನಾಗಿಲ್ಲ, ಇದೇರೀತಿ ಹೆಚ್ಚು ಆಹಾರ ಬೆಳೆಸುವ ಯೋಜನೆಯವರಿಗೂ ಸಹ ಇದರಿಂದ ಬಹಳ ನಷ್ಟವಾಗಿದೆಯೆಂಬ ಅಂಶ ಸರ್ಕಾರದವರಿಗೆ ತಿಳಿದುಬಂದಿದೆಯೇ?

The Hon'ble Sri T. MARIAPPA.—That question does not arise out of this?

ಶ್ರೀ ಎಚ್. ಸಿದ್ದನಂಜಪ್ಪನವರು —ಹಾಸನ ಮತ್ತು ಹೊಳೆನರಸೀಪುರ ಈ ಎರಡು ಸ್ಥಳಗಳಲ್ಲಿರತಕ್ಕ ಡಿಪೋಗಳಿಂದ ಯಾವಯಾವ ಬಗೆಯ ಬೀಜದ ಬತ್ತವನ್ನು ಹಂಚಿಕೆ ಮಾಡಲಾಯಿತೆಂದು ಪ್ರಶ್ನೆ ಕೇಳಲಾಗಿದೆ. ಆದರೆ ಹಾಗೆ ತಾವು ಬೀಜದ ಬತ್ತ ಹಂಚುವುದಕ್ಕೆ ಮುಂಚೆ ಆ ಪ್ರದೇಶದ ಪರಿಸ್ಥಿತಿ ಹೇಗಿತ್ತೆಂಬುದನ್ನು ಅಂದರೆ ಬೆಳೆಗಳು ಯಾವರೀತಿ ಆಗುತ್ತಿದ್ದವೆಂಬ ಬಗ್ಗೆ ತಾವೇನಾದರೂ ಪರಿಶೀಲನೆ ಮಾಡಿದ್ದಿರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು.

ಶ್ರೀ ಎಚ್. ಸಿದ್ದನಂಜಪ್ಪನವರು.—ಹಾಗೆ ತಾವು ಹೊಸದಾಗಿ ಬೀಜದ ಕಾಳುಗಳನ್ನು ಹಂಚಿದ ಮೇಲೆ ಏನು ವ್ಯತ್ಯಾಸ ಕಂಡುಬಂದಿದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಂಚಿರತಕ್ಕ ಬೀಜದಲ್ಲಿ ಏನೂ ದೋಷವಿಲ್ಲವೆಂದು ತಿಳಿದುಬಂದಿದೆ.

ಶ್ರೀ ಎಂ ಎಲ್. ನಂಜರಾಜೇಅರಸರು (ಮೈಸೂರು ಜಿಲ್ಲೆ).—ಹೀಗೆ ತಾವು ಹಂಚಿರತಕ್ಕ ಬೀಜಗಳು, ತಾವೇ ಇಲಾಖಾ ಮುಖಾಂತರ ಖುದ್ದಾಗಿ ಬೆಳೆಸಿ ತಯಾರುಮಾಡಿದ್ದೋ ಅಥವಾ ಬೇರೆ ಎಲ್ಲಿಂದಲಾದರೂ ಕೊಂಡುತರಿಸಿದ್ದೋ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮೊದಲು ನಮ್ಮ ಪರೀಕ್ಷಾಕ್ಷೇತ್ರಗಳಲ್ಲಿ ಬೆಳೆದು, ತದನಂತರ ಅದು ರೈತರುಗಳಿಗೆ ಹಂಚಿಕೆಯಾದದ್ದು, ಅವರು ಆ ಹಂಚಿಕೆಯಾಗಿದ್ದ ಬೀಜದಿಂದ ಬೆಳೆಸಿದ್ದಂಥ ದವಸವನ್ನು ಅರಿಸಿಕ್ಕೊಂಡು ತಂದಿದ್ದಾಗಿದೆ.

ಶ್ರೀ ಎಂ. ಎಲ್. ನಂಜರಾಜೇಅರಸಿನವರು.—ಹೀಗೆ ತಾವು ಹಂಚುತ್ತಿರುವ ಬತ್ತಕ್ಕೆ ಜನರಿಂದ ಹೆಚ್ಚು ಪ್ರೋತ್ಸಾಹ ದೊರೆಯುತ್ತಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

The Hon'ble Sri T MARIAPPA.—That does not arise, Sir. My friend's question was purely with regard to the fungus disease that was set in in Hassan & Hole-Narsipur areas.

ಶ್ರೀ ಬಿ. ಹುಚ್ಚೇಗೌಡರು (ತುಂಕೂರು ಜಿಲ್ಲೆ).—ಹಾಗೆ ತಾವು ಹಂಚಿರತಕ್ಕ ಬೀಜದ ಬತ್ತ, ರೈತರಿಂದ ನೇರವಾಗಿ ತರಿಸಿ ಹಂಚಿಸಿದ್ದೋ, ಅಥವಾ ಡಿಪೋಕ್ಕೆ ಬಂದ ದವಸದಲ್ಲೇ ವಿಂಗಡಿಸಿ ಹಂಚಿಸಿದ್ದೋ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ರೈತರಿಂದ ನೇರವಾಗಿ, ಚುನಾಯಿಸಿ ತಂದಂಥಾದ್ದು.

ಶ್ರೀ ಬಿ. ಹುಚ್ಚೇಗೌಡರು.—ಡಿಪೋಕ್ಕೆ ಬಂದಿದ್ದಂಥಾ ದವಸದಲ್ಲೇ ವಿಂಗಡಿಸಿ, ಹೀಗೆ ಹಂಚಿಸಿದ್ದರಿಂದ ಹೀಗೆಲ್ಲ ತೊಂದರೆಯಾಯಿತೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದು ಊಹಾಪೋಹದ ಪ್ರಶ್ನೆ.

ಶ್ರೀ ಎಸ್. ಕರಿಯಪ್ಪನವರು (ಬೆಂಗಳೂರು ಜಿಲ್ಲೆ).—ಈ ಬರೋಡಾ ಬತ್ತವೆಂದು ತಿಳಿಸಿರುವುದು ಯಾವುದು ಸ್ವಾಮಿ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಒಂದುವೇಳೆ ನೀರು ಸ್ವಲ್ಪ ಕಮ್ಮಿಯಾದರೂ, ಇತರ ಜಾತಿ ಬತ್ತದ ಹಾಗೆ, ಒಣಗದೆ, ಸರಿಯಾಗಿ ಬೆಳೆ ಆಗುತ್ತದೆಂದು ತಿಳಿದುಬಂದುದರಿಂದ, ಈಗ ಇದೊಂದು ಹೊಸ ಜಾತಿಯ ಬತ್ತವನ್ನು ಕೇವಲ ಕಮ್ಮಿ ಪ್ರಮಾಣದಲ್ಲಿ ಪರೀಕ್ಷಾರ್ಥವಾಗಿ ಕೆಲವುಕಡೆ 4 ಪಲ್ಲದವರಿಗೆ ಕೊಡಲಾಗಿದೆ.

ಶ್ರೀ ಕೆ. ವಿ. ಶಂಕರಗೌಡರು (ಮಂಡ್ಯ ಜಿಲ್ಲೆ).—ಕೊಯಮತ್ತೂರು ಬತ್ತಕ್ಕೆ ಸದಾ ರೋಗವಿದ್ದೇ ಇರುವುದರಿಂದ, ಇದನ್ನು ನಿಲ್ಲಿಸಬೇಕೆಂಬ ಸಲಹೆಗಳೇನಾದರೂ ಬಂದಿವೆಯೇ?

ಮಾನ್ಯ ಶ್ರೀ ಟಿ ಮರಿಯಪ್ಪನವರು.—ಈ ಬೆಳೆ ಅನೇಕ ವರ್ಷಗಳಿಂದಲೂ ಮೈಸೂರು ದೇಶದಲ್ಲಿ ನಿರಾತಂಕವಾಗಿ ಆಗುತ್ತದೆ. Coimbatore variety is a most facinating variety in Mysore.

Sri K. V. SHANKARA GOWDA.—You have said that Coimbatore variety is susceptible to disease. Was it found

(K. V. SHANKARA GOWDA).

out only last year or was it known even before ?

The Hon'ble Sri T. MARIAPPA.— It is very well known that this variety is susceptible to disease. But it is very heavy yielding, and therefore people take to it.

Working of the Orders Restricting the Starting of Hotels in Towns and Cities.

*ಪ್ರಶ್ನೆ. 194.—ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಡಿಸ್ಟ್ರಿಕ್ಟ್—ಸಾರ್ವತ್ರಿಕ ಚುನಾವಣೆ ಸ್ಥಾನ).—ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ.—

(a) ಸಿಟಿಗಳಲ್ಲಿಯೂ, ಟೌನುಗಳಲ್ಲಿಯೂ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿಯೂ ಹೊಟೇಲುಗಳನ್ನು ನಡೆಸುವುದನ್ನು ನಿರ್ಬಂಧಗೊಳಿಸಲು ಸರ್ಕಾರದವರು ಯಾವ ಯಾವ ಹುಕುಮುಗಳನ್ನು ಸಾದರು ಮಾಡಿರುತ್ತಾರೆ ;

(b) ಆ ಹುಕುಮುಗಳು ಎಷ್ಟರಮಟ್ಟಿಗೆ ಆಚರಣೆಗೆ ತರಲ್ಪಟ್ಟಿವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು (ಭಿಳಾಡಳಿತ ಶಾಖೆಯ ನಡೆವರು).—

ಉತ್ತರ.—(a) (1) ಮೈಸೂರು ಸಂಸ್ಥಾನದಲ್ಲಿ (ಆಹಾರ ಮತ್ತು ಪಾನೀಯಗಳನ್ನು ಒದಗಿಸುವ ವ್ಯವಸ್ಥೆಗಳೇ ಮುಂತಾದುವುಗಳಿಂದ ಒದಗಿಸಲ್ಪಡುವ ಊಟಗಳ ವಿಷಯದಲ್ಲಿ ನಿರ್ಬಂಧಗಳನ್ನೇರ್ಪಡಿಸುವುದಕ್ಕೆ ಸಂಬಂಧಪಟ್ಟ) 1949ನೆಯ ಇಸವಿ ಹುಕುಮು. ಈ ಹುಕುಮು ಈಚೆಗೆ ರದ್ದುಮಾಡಲ್ಪಟ್ಟು ಅದಕ್ಕೆ ಬದಲಾಗಿ 1951ನೆಯ ಇಸವಿ ಮಾರ್ಚಿ 8ನೆಯ ತಾರೀಖಿನ ಎಸ್. ಡಿ. 8180-ಆರ್. 24-50-273 ನೆಯ ನಂಬರಿನ ಸರ್ಕಾರಿ ಇಸ್ತಿಹಾರ್ನಾಮೆಯ ಪ್ರಕಾರ 1951ನೆಯ ಇಸವಿಯ ಮೈಸೂರು ಸಂಸ್ಥಾನದ (ಊಟಗಳನ್ನು ಒದಗಿಸುವ ಸಂಬಂಧದಲ್ಲಿ ಕಟ್ಟುನಿಟ್ಟಾದ ನಿರ್ಬಂಧಗಳನ್ನೇರ್ಪಡಿಸುವುದಕ್ಕೆ ಸಂಬಂಧಪಟ್ಟ) ಆಹಾರದ ಹುಕುಮು ಸಾದರ್ಯಾಡಲ್ಪಟ್ಟಿರುತ್ತದೆ.

(2) 1950ನೆಯ ಇಸವಿಯ VIIIನೆಯ ನಂಬರಿನ ಆಕ್ಟಾದ ಮೈಸೂರು ಸಂಸ್ಥಾನದ ಗ್ರಾಮ ಪಂಚಾಯಿತಿಗಳ (ತಿದ್ದುಪಡಿ) ಆಕ್ಟು.

(b) ಅವು ಆಚರಣೆಗೆ ತರಲ್ಪಡುತ್ತಿವೆ.

ಶ್ರೀ ಟಿ. ಮಾದಯ್ಯಗೌಡರು.—ನನ್ನ (ಬ) ಪ್ರಶ್ನೆಗೆ ಉತ್ತರವಾಗಿ, ಆಚರಣೆಗೆ ತರಲ್ಪಡುತ್ತಿವೆ, ಎಂದು ತಿಳಿಸಲಾಗಿದೆ. ಹಾಗೆ ಅವುಗಳನ್ನು ಜಾರಿಲಿಟ್ಟಿರುವುದರಿಂದ ಅಲ್ಲಿ ಹೇಗೆ ಕೆಲಸ ಕಾರ್ಯಗಳು ಜರುಗುತ್ತಿವೆಂಬ ಬಗ್ಗೆ ಆಗಾಗ್ಗೆ ವಿಮರ್ಶೆಮಾಡುತ್ತಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು. ಈಗಾಗಲೇ ಕೆಲವು ಜಿಲ್ಲೆಗಳಿಂದ ವರದಿಗಳು ಬಂದಿರುತ್ತವೆ. ಚಿತ್ರದುರ್ಗದಲ್ಲಿ 102 ಹೋಟಲುಗಳನ್ನು, ಬೆಂಗಳೂರು ಜಿಲ್ಲೆಯಲ್ಲಿ 205 ಹೋಟಲುಗಳನ್ನು ಮತ್ತು ತುಂಕೂರು ಜಿಲ್ಲೆಯಲ್ಲಿ 214 ಹೋಟಲುಗಳನ್ನು ನಿಲ್ಲಿಸಲಾಗಿದೆ. ಇನ್ನು ಬಾಕಿ ಜಿಲ್ಲೆಗಳ ವರದಿ ಬಂದಿಲ್ಲ.

ಶ್ರೀ ಟಿ. ಮಾದಯ್ಯಗೌಡರು.—ಗ್ರಾಮಾಂತರ ಪ್ರದೇಶದಲ್ಲಿರತಕ್ಕವರಿಗೆ ಎಷ್ಟು ಹೋಟಲಿಗೆ ಲೈಸನ್ಸು ಕೊಡಲಾಗಿದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಟಿ. ಮಾದಯ್ಯಗೌಡರು.—ಅಕ್ರಮವಾಗಿ, ಕಾನೂನಿಗೆ ವಿರೋಧವಾಗಿ ಅಥವಾ ಲೈಸನ್ಸ್ ಪಡೆಯದೆ ಹೋಟಲ್ ಇಟ್ಟುಕೊಂಡಿರತಕ್ಕವರಿಗೆ ಶಿಕ್ಷೆ ವಿಧಿಸಲಾಗುತ್ತಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಶಿಕ್ಷೆ ವಿಧಿಸಲಾಗುತ್ತಿದೆ. ಸಾಧ್ಯವಾದಷ್ಟನ್ನು ಕಮ್ಮಿ ಮಾಡುತ್ತಿದ್ದಾರೆ.

ಶ್ರೀ ಟಿ. ಮಾದಯ್ಯಗೌಡರು.—ಗ್ರಾಮಾಂತರ ಪ್ರದೇಶಗಳಲ್ಲಿ ಈ ಹೋಟಲುಗಳನ್ನು ಇಡತಕ್ಕ ಬಗ್ಗೆ ಹೇಗೆ ನಿರ್ಬಂಧಗಳನ್ನು ಕಲ್ಪಿಸಲಾಗಿದೆಯೋ, ಹಾಗೇ ಈ ಸಿಟಿ ಮತ್ತು ಟೌನ್ ಪ್ರದೇಶಗಳಲ್ಲಿ ಈ ನಿರ್ಬಂಧಗಳನ್ನಿಡಲಾಗಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈಗ ಟೌನ್ ಮುನಿಸಿಪಾಲಿಟಿಗಳು ಎಲ್ಲೆಲ್ಲಿ ಇರುತ್ತವೆಯೋ ಅವುಗಳಿಗೇ ಈ ಲೈಸನ್ಸ್ ಕೊಡತಕ್ಕ ಅಧಿಕಾರ ಕೊಡಲಾಗಿದೆ. ಇನ್ನು ಜಿಲ್ಲಾ ಕಸಬೆಗಳಲ್ಲೆಲ್ಲಾ, ಮೊದಲಿಂದಲೂ ಯಾವ ರೀತಿ ನಿರ್ಬಂಧಗಳು ಇದ್ದವೋ ಈಗಲೂ ಅದೇ ಆರ್ಡರುಗಳು ಜಾರೀಲಿವೆ. ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲೆಲ್ಲಿ ಗ್ರಾಮ ಪಂಚಾಯಿತಿಗಳಿರುತ್ತವೆಯೋ ಅಂಥವುಗಳಿಗೆ ಆಕ್ಟ್‌ನ್ನು ತಿದ್ದುಪಡಿ ಮಾಡಿ, ಅಂಥಾ ಸ್ಥಳಗಳಲ್ಲಿ ಹೋಟಲುಗಳನ್ನಿಡಲು ಲೈಸನ್ಸು ಕೊಡತಕ್ಕ ಅಧಿಕಾರವನ್ನು ತಾಲ್ಲೂಕಿನ ಅಮಲ್ದಾರರಿಗೆ ಕೊಡಲಾಗಿದೆ. ಬೆಂಗಳೂರು ವಿಚಾರ ತಮಗೇ ಗೊತ್ತಿದೆ.

ಶ್ರೀ ವಿ. ಎಸ್. ನಾರಾಯಣರಾಯರು (ಬೆಂಗಳೂರು ನಗರ).—ಈಗ ಪ್ರಶ್ನೆ ಕೇಳಿರತಕ್ಕದ್ದು ಹೋಟಲುಗಳನ್ನಿಡತಕ್ಕ ಬಗ್ಗೆ ನಿರ್ಬಂಧಹಾಕಬೇಕು, ಎಂದು. ಅಂದರೆ ತಾವು ಕೈಗೊಂಡಿರತಕ್ಕ ಕಾರ್ಯ ಈ ಹೋಟಲುಗಳು ಹೆಚ್ಚದಂತೆ ನಿರ್ಬಂಧಗೊಳಿಸತಕ್ಕ ಬಗ್ಗೆಯೋ ಅಥವಾ ಆಹಾರ ದವಸಗಳನ್ನು ಉಪಯೋಗ ಪಡಿಸತಕ್ಕ ಬಗ್ಗೆ ನಿರ್ಬಂಧಪಡಿಸಬೇಕೆಂದೋ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆಹಾರ ಸಾಮಗ್ರಿಗಳ ಬಗ್ಗೆ Mysore Food order ಎಂದು ನಿರ್ದಿಷ್ಟವಾಗಿ ಒಂದು ಆಜ್ಞೆ ಹೊರಡಿಸಲಾಗಿದೆ. ತಮಗೆ ನಕಲು ಬೇಕಾದರೆ ಅನಂತರ ಕೊಡುತ್ತೇನೆ.

ಶ್ರೀ ವಿ. ಎಸ್. ನಾರಾಯಣರಾಯರು.—ಹಾಗಾದರೆ ಈಗ ಹೋಟಲುಗಳಲ್ಲಿ ಇಡ್ಲಿ ದೋಸೆ ಇತ್ಯಾದಿಗಳನ್ನು ಮಾಡಕೂಡದೆಂದು ಎಲ್ಲಿ ನಿರ್ಬಂಧಿಸಲಾಗಿದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಡ್ಲಿ ದೋಸೆ ಇತ್ಯಾದಿಗಳನ್ನು ಮಾಡಕೂಡದೆಂದೇನೂ ತಿಳಿಸಿಲ್ಲವಲ್ಲಾ ?

ಶ್ರೀ ವಿ. ಎಸ್. ನಾರಾಯಣರಾಯರು.—ಹಾಗಾದರೆ ಅವರು ಅವುಗಳನ್ನು ಮತ್ತೆ ಏತರಿಂದ ಮಾಡುತ್ತಾರೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆಹಾರ ಸಾಮಗ್ರಿಗಳಿಗೆ ಸಂಬಂಧಪಟ್ಟ ವಸ್ತುಗಳಿಂದ ಮಾತ್ರ ತಯಾರಿಸಬಾರದೆಂದು ತಿಳಿಸಲಾಗಿದೆ. ಕಾರಣ ಆಹಾರದ ಅಭಾವವೇ ಆಗಿದೆ.

ಶ್ರೀ ವಿ. ಎಸ್. ನಾರಾಯಣರಾಯರು.—ಹಾಗೆ ಅಭಾವವಿರತಕ್ಕ ಆಹಾರ ಸಾಮಗ್ರಿಗಳು ಯಾವುವು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಕ್ಕಿ, ರಾಗಿ, ಇತ್ಯಾದಿ ಧಾನ್ಯಗಳು. ಆಗಲೇ ತಿಳಿಸಿದ್ದೇನೆ.